ಎಲ್ಲಿ ಶಾಶ್ವತ ಜಲ ಮೂಲಗಳು ಇಲ್ಲವೋ ಅಲ್ಲಿ ಟ್ಯಾಂಕರ್ ಮೂಲಕ ನೀರನ್ನು ಒದಗಿಸುವಂತಹ ಅವಕಾಶವನ್ನು ಮೊದಲು ಹಣವನ್ನು ಬಿಡುಗಡೆ ಮಾಡಿದ್ದೇವೆ. ಶಾಶ್ವತ ಜಲಮೂಲಗಳು ಇದ್ದರೆ ಅದರ ಮೂಲಕ ಎಷ್ಟೇ ಕಿ.ಮೀ. ದೂರವಿದ್ದರೂ ಕೂಡ ಇದಕ್ಕೆ ಪೈಪ್ ಲೈನ್ ಹಾಕಿಕೊಂಡು ನೀರು ಕೊಡಬೇಕೆಂದು ಕೂಡ ಮಾತನಾಡಿದ್ದೇವೆ. ಮತ್ತೆ ಸತ್ಕೋಲೆಯನ್ನು ಕೂಡ ಮಾಡಿದ್ದೇವೆ. 22ನೇ ತಾರೀಖು ಜಿಲ್ಲಾಧಿಕಾರಿಗಳ ಒಂದು ಸಭೆಯನ್ನು ಕರೆಯುತ್ತೇನೆ, ಗ್ರಾಮಾಂತರ ಪ್ರದೇಶದ ಮತ್ತು ನಗರ ಪ್ರದೇಶದ ಕುಡಿಯುವ ನೀರಿನ ವಿಷಯದಲ್ಲಿ ಮತ್ತೆ 15 ಕೋಟಿ ರೂ.ಗಳನ್ನು ಹೆಚ್ಚುವರಿ ಕೇಳಿದ್ದಾರೆ. ಈಗಾಗಲೇ ಸರ್ಕಾರದವರು 10 ಕೋಟಿ ರೂ.ಗಳನ್ನು ಜನವರಿ 31ನೇ ತಾರೀಖಿನಂದು ಬಿಡುಗಡೆ ಮಾಡಿದ್ದೇವೆ. ಅದೇ ರೀತಿ 28ನೇ ತಾರೀಖು 10 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆ. ಇದಕ್ಕೆ ಹಣದ ಕೊರತೆ ಇಲ್ಲವೆಂದು ಅಧಿಕಾರಿಗಳು ಮೊನ್ನೆ ಸಭೆಯಲ್ಲಿ ತಿಳಿಸಿದ್ದಾರೆ. ತಮಗೆ ಇನ್ನು ಏನಾದರೂ ಸಮಸ್ಯಾತ್ಮಕ ಗ್ರಾಮಗಳು ಇವೆ ಎಂದು ಇದ್ದರೆ ಖಂಡಿತವಾಗಿ ಈ ಕೆಲಸವನ್ನು ಪೂರೈಸಿಕೊಡುತ್ತೇವೆ.

ವಿಷಯ :- ತುಮಕೂರು ಮತ್ತು ಕುಣಿಗಲ್ ನಡುವಿನ ರಸ್ತೆಯನ್ನು ಅಗಲಗೊಳಿಸುವುದು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 71 (501)

ಶ್ರೀ ಎಸ್.ಪಿ. ಮುದ್ದಹನುಮೇಗೌಡ

ಮಾನ್ಯ ಲೋಕೋಪಯೋಗಿ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

ಅ) ತುಮಕೂರು- ಕುಣಿಗಲ್ ಮಧ್ಯೆ ಹಾದು ಹೋಗುವ ರಾಜ್ಯ ಹೆದ್ದಾರಿ ನಂ. 20 ಅತ್ಯಂತ ಕಿರಿದಾಗಿ ಮತ್ತು ಶಿಥಿಲವಾಗಿರುವುದರಿಂದ ವಾಹನಗಳ ಮತ್ತು ಪ್ರಯಾಣಿಕರಿಗೆ ತೀವ್ರ ತೊಂದರೆಯತಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ ಈ ರಸ್ತೆಯನ್ನು ದುರಸ್ತಿಗೊಳಿಸುವ ಹಾಗೂ ಅಗಲಗೊಳಿಸುವ ಬಗ್ಗೆ ಸರ್ಕಾರ ಪರಿಶೀಲಿಸಿದೆಯೇ.

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶಿವಾನಂದ ಎಚ್ ಕೌಜಲಗಿ

(ಲೋಕೋಪಯೋಗಿ ಸಚಿವರು)

ಅ) ಬಂದಿದೆ

ಆ) ಪರಿಶೀಲನೆಯಲ್ಲಿದೆ,.

ಇ) ತುಮಕೂರು- ಕುಣಿಗಲ್ ಮಧ್ಯೆ ಹಾದು ಹೋಗುವ ರಸ್ತೆಯು ಕೊರಟಗೆರೆ- ಕೊಳ್ಳೇಗಾಲ ರಾಜ್ಯ ಹೆದ್ದಾರಿ ಸಂಖ್ಯೆ: 33ರ ಭಾಗವಾಗಿದ್ದು, 44 ಕಿಮೀ. ಉದ್ದವಿದೆ. ಈ ರಸ್ತೆಯು ಪ್ರಸಕ್ತ ಏಕಪಥ ರಸ್ತೆಯಾಗಿದ್ದು, ಇದನ್ನು 5.5 ಮೀಟರ್ ಅಗಲಪಡಿಸಿ ಅಭಿವೃದ್ಧಿ ಪಡಿಸುವುದಕ್ಕೆ ಒಟ್ಟು 160 ಲಕ್ಷ ರೂ.ಗಳ ಅಂದಾಜು ಆಗುತ್ತದೆ. ಅನುದಾನದ ಲಭ್ಯತೆಯನ್ನು ಅನುಸರಿಸಿ

ಹಂತ ಹಂತವಾಗಿ ಈ ರಸ್ತೆಯನ್ನು ಅಭಿವೃದ್ಧಿ ಪಡಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಪ್ರಸಕ್ತ ಸಾಲಿನಲ್ಲಿ ಒಟ್ಟು 11.60 ಲಕ್ಷ ರೂ.ಗಳ ವೆಚ್ಚದಲ್ಲಿ ಅತಿ ಅವಶ್ಯವಿದ್ದ 1.0 ಕಿ.ಮೀ. ಉದ್ದಕ್ಕೆ ಅಗಲ ಪಡಿಸಿ, 3.0 ಕಿಮೀ ಉದ್ದಕ್ಕೆ ಮರು ಡಾಂಬರೀಕರಣ ಮಾಡಿದ್ದು, ಉಳಿದ ಭಾಗಗಳನ್ನು ಸಂಚಾರಕ್ಕೆ ತೊಂದರೆಯಾಗದಂತೆ ನಿರ್ವಹಿಸಲಾಗಿದೆ. ರಸ್ತೆಗಳಲ್ಲಿ ಆಗಿರುವ ಗುಂಡಿಗಳನ್ನು ತುಂಬಿ ಸಂಚಾರ ಸುಗಮ ಗೊಳಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:- ಮಾನ್ಯ ಅಧ್ಯಕ್ಷರೆ, ಕೊರಟಗೆರೆ ಮತ್ತು ಕೊಳ್ಳೇಗಾಲ ರಾಜ್ಯ ಹೆದ್ದಾರಿ ಏನಿದೆ ಇದು ತುಮಕೂರು ಕುಣಿಗಲ್ ಮಧ್ಯೆ ಹಾದುಹೋಗಿ ರುತ್ತದೆ. ಅಲ್ಲಿ 5 ನಿಮಿಷಕ್ಕೆ ಒಂದು ವಾಹನ ಸಂಚರಿಸುತ್ತದೆ. ಇವತ್ತು ಈ ರಸ್ತೆ ಬಹಳ ಶಿಥಿಲವಾಗಿದೆ. ಮತ್ತು ಬಹಳ ಕಿರಿದಾಗಿದೆ. ಇದರಿಂದ ಪ್ರಯಾಣಿಕರಿಗೆ ಬಹಳ ತೊಂದರೆಯಾಗುತ್ತಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೆ ಎನ್ನುವ ಪ್ರಶ್ನೆಗೆ 'ಬಂದಿದೆ' ಎನ್ನುವ ಉತ್ತರ ಇದೆ. ಆದುದರಿಂದ ನಾನು ಸರ್ಕಾರವನ್ನು ಕೇಳುತ್ತೇನೆ. ಈ ಒಂದು ರಸ್ತೆಯನ್ನು ದುರಸ್ತಿ ಮಾಡುವುದಕ್ಕೆ ಸರ್ಕಾರ ನಿರ್ದಿಷ್ಟವಾದಂತಹ ಕಾರ್ಯಕ್ರಮವನ್ನು ಮಾಡಲು 160 ಲಕ್ಷ ರೂ.ಗಳ ಅಂದಾಜು ಬೇಕಾಗುತ್ತದೆ ಎಂದು ಇದೆ. ಈ ಅಂದಾಜಿಗೆ ಏನಾದರೂ ಮಂಜುರಾತಿ ಇದೆಯೋ, ಈ ವರ್ಷ ಸರ್ಕಾರ ಏನಾದರೂ ಹಣವನ್ನು ಕೊಟ್ಟು ರಸ್ತೆಯ ಸ್ವಲ್ಪ ಭಾಗವನ್ನಾದರೂ ಕೂಡ ಅಗಲ ಮಾಡುವುದು ಮತ್ತು ಶಿಥಿಲವಾಗಿರತಕ್ಕಂಥ ರಸ್ತೆಯನ್ನು ದುರಸ್ತಿ ಮಾಡುವ ಬಗ್ಗೆ ಕಾರ್ಯಕ್ರಮವೇನಾದರೂ ಹಾಕಿಕೊಂಡಿದೆಯೇ ಎನ್ನುವ ಬಗ್ಗೆ ಸಮಂಜಸವಾದ ಉತ್ತರ ಕೊಡಬೇಕು.

ಶ್ರೀ ಶಿವಾನಂದ ಹೆಚ್ ಕೌಜಲಗಿ ಮಾನ್ಯ ಅಧ್ಯಕ್ಷರೆ, ಇದು ಒಂದು ನಮ್ಮ ರಾಜ್ಯದ ಹೆದ್ದಾರಿ ರಾಜ್ಯ ಹೆದ್ದಾರಿ ನಿಯಮದ ಪ್ರಕಾರ 5.50 ಮೀ. ಇರಬೇಕಾಗುತ್ತದೆ. ಆದರೆ ಮಾನ್ಯ ಸದಸ್ಯರು ಹೇಳಿದ ಪ್ರಕಾರ ಈ ರಸ್ತೆ ಚಿಕ್ಕದಾಗಿದೆ. ಈ ರಸ್ತೆ 3.75ಮಿ. ಇದೆ. ಇದನ್ನು 5.50 ಮೀ. ಮಾಡುವುದಕ್ಕೆ ಈಗಾಗಲೇ ಸರ್ಕಾರ ಪ್ರಯತ್ನ ಮಾಡುತ್ತಿದೆ. ಈಗ ಸರ್ಕಾರದವರು ಇದರ ರೇಖಾ ಅಂದಾಜುಗಳನ್ನು ತಯಾರಿಸುತ್ತಿದ್ದಾರೆ.

ಅಧ್ಯಕ್ಷರು:- ಸಚಿವರೇ, ಅವರು ಏನು ಕೇಳುತ್ತಿದ್ದಾರೆ ಎಂದರೆ ಅವರು ನೀವು ಹೇಳಿದ್ದನ್ನು ಒಪ್ಪಿಕೊಂಡಿದ್ದಾರೆ. ಈಗ ನಿರ್ದಿಷ್ಟವಾಗಿ ಎಷ್ಟು ಹಣವನ್ನು ಖರ್ಚು ಮಾಡುತ್ತೀರೆಂದು ಕೇಳುತ್ತಿದ್ದಾರೆ. ನೀವು 165ಲಕ್ಷ ರೂ.ಗಳು ಬೇಕೆಂದು ಹೇಳಿದ್ದೀರಿ. ಆದರಲ್ಲಿ ತಕ್ಷಣ ಈಗ ಕೆಲಸ ಪ್ರಾರಂಭ ಮಾಡುವುದಕ್ಕೆ ಎಷ್ಟು ಮಾಡುತ್ತೀರಿ ಅದನ್ನು ಹೇಳಿ?

ಶ್ರೀ ಶಿವಾನಂದ ಹೆಚ್. ಕೌಜಲಗಿ:- ಹಂತ ಹಂತವಾಗಿ ನಾವು ಇದನ್ನು ಮಾಡುತ್ತೇವೆ. ಒಮ್ಮೆಲೆ 165 ಲಕ್ಷ ರೂ.ಗಳನ್ನು ಒದಗಿಸುವುದಕ್ಕಾಗುವುದಿಲ್ಲ. ಈ ವರ್ಷ ಸಾಧ್ಯವಾದಷ್ಟು ಹೆಚ್ಚಿಗೆ ಹಣವನ್ನು ಒದಗಿಸಿ ಕೆಲಸ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ.